**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.1025/2017**

**ಸಿ.ಡಬ್ಲ್ಯೂ-6**

**ಪಿ.ಡಬ್ಲ್ಯೂ-7**

ಸಾಕ್ಷಿಯ ಹೆಸರು : ಮಾನಂದಾ ಬಿರಾದಾರ

ತಂದೆ/ಗಂಡನ ಹೆಸರು : ಸಿದ್ರಾಮ

ವಯಸ್ಸು : 50 ವರ್ಷ

ಉದ್ಯೋಗ : ಕೂಲಿ

ವಾಸಸ್ಥಳ : ಲೋಣಿ ಬಿ.ಕೆ.

**ದಿನಾಂಕ: 28-02-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1 ರವರ ಪರಿಚಯ ಇರುವುದಿಲ್ಲ. ಚಾಸಾ 4 ನನ್ನ ತಮ್ಮ. ಚಾಸಾ 5 ರವರ ಪರಿಚಯ ಇರುವುದಿಲ್ಲ. ಚಾಸಾ 7 ನನ್ನ ಮಾವ. ಚಾಸಾ 8 ರಿಂದ 10 ರವರ ಪರಿಚಯ ಇರುವುದಿಲ್ಲ. ನನಗೆ ಈ ಘಟನೆ ಕುರಿತು ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಜಗಳವನ್ನು ನೋಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ದಿಃ19.02.2017 ರಂದು ಬೆಳಿಗ್ಗೆ 8.30 ಗಂಟೆಗೆ ಚಾಸಾ 1 ರವರು ನನಗೆ ಪೋನ ಮಾಡಿ ತಮ್ಮೂರಿನ ಗೋಡಾವನ ಹತ್ತಿರ ನಿಂತಿರುವ ಆರೋಪಿ ಇವರಿಗೆ ಚಾಸಾ 10 ರವರಿಗೆ ಕರೆಯಿಸಿ ನನಗೆ ಅವನ ಜೊತೆ ಕಳುಹಿಸಿಕೊಡಿರಿ ನಾನು ಎಷ್ಟು ದಿವಸ ಅಂತಾ ನಮ್ಮ ಅಕ್ಕನ ಮನೆಯಾಗ ಹುಡುಗಿಗ ತೊಗೊಂಡು ಇರಲಿ ಅಂತಾ ಹೇಳಿದಾಗ ಆರೋಪಿಯು ಚಾಸಾ

-2-

1 ರವರಿಗೆ ಏ ರಂಡಿ ನಾ ಎಲ್ಲಿ ನಿಂದು ನ್ಯಾಯ ಮಾಡಿನಿ ಬೇಕಾರದೆ ಹೋಗು ನಿನ್ನ ಗಂಡನ ಮನೆಗೆ ನನಗೆನು ಕೇಳುತಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈ ಹಿಡಿದು ಜಗ್ಗಾಡಿ ಅಲ್ಲೆ ಬಿದ್ದಿರುವ ಕಲ್ಲಿನಿಂದ

ಬೆನ್ನಲ್ಲಿ ಹೊಡೆದು ನನಗೆ ನುಗ್ಗಿಸಿಕೊಟ್ಟಿರುತ್ತಾನೆ ಇದರಿಂದ ಬಲಗೈ ರಟ್ಟೆಗೆ ತೆರಿಚೀದ ಗಾಯವಾಗಿರುತ್ತದೆ ಮತ್ತು ಅಲ್ಲೇ ಇದ್ದ ಜನರು ಜಗಳ ಬಿಡಿಸಿದ್ದು ಆರೋಪಿಯು ತನಗೆ ಜೀವ ಬೆದರಿಕೆ ಹಾಕಿರುವ ಬಗ್ಗೆ ತನಗೆ ತಿಳಿಸಿರುತ್ತಾಳೆ ಮತ್ತು ಈ ಕುರಿತು ಚಾಸಾ 1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ದಿಃ19.02.2017 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ. 6 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**